# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 74 (660) |
| ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ |
| ಉತ್ತರಿಸುವ ದಿನಾಂಕ | : | 23-12-2022 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪರಿಶಿಷ್ಟ ಸಮುದಾಯದ ಅಭಿವೃದ್ಧಿಗಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಯಡಿ (ಎಸ್‌ಸಿಪಿ ಮತ್ತು ಟಿಎಸ್‌ಪಿ) ಪ್ರಸಕ್ತ ಸಾಲಿನಲ್ಲಿ ಹಂಚಿಕೆಯಾದ ಒಟ್ಟು ಅನುದಾನ ಎಷ್ಟು; ಬಿಡುಗಡೆಯಾದ ಅನುದಾನ ಎಷ್ಟು; | ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಎಸ್.ಸಿ.ಎಸ್.ಪಿ ಅಡಿ ರೂ.20,843.03 ಕೋಟಿ ಹಾಗೂ ಟಿ.ಎಸ್.ಪಿ ಅಡಿ ರೂ.8,322.78 ಕೋಟಿ ಒಟ್ಟು ರೂ.29,165.81 ಕೋಟಿ ಅನುದಾನ ಹಂಚಿಕೆಯಾಗಿರುತ್ತದೆ.<br><br>ಇದುವರೆಗೂ ಎಸ್.ಸಿ.ಎಸ್.ಪಿ ಅಡಿ ರೂ.13,483.79 ಕೋಟಿ ಹಾಗೂ ಟಿ.ಎಸ್.ಪಿ ಅಡಿ ರೂ.5,165.92 ಕೋಟಿ ಒಟ್ಟು ರೂ.18,649.71 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. |
| ಆ) | ಬಿಡುಗಡೆಯಾದ ಅನುದಾನದಲ್ಲಿ ಈವರೆಗೂ ಬಳಕೆಯಾಗಿರುವ ಅನುದಾನದ ಮೊತ್ತ ಎಷ್ಟು; (ಶೇಕಡವಾರು ಸಂಪೂರ್ಣ ಮಾಹಿತಿ ನೀಡುವುದು) | ಬಿಡುಗಡೆಯಾಗಿರುವ ಅನುದಾನದಲ್ಲಿ ಇದುವರೆಗೂ ಎಸ್.ಸಿ.ಎಸ್.ಪಿ ಅಡಿ ರೂ.10,783.47 ಕೋಟಿ ಹಾಗೂ ಟಿ.ಎಸ್.ಪಿ ಅಡಿ ರೂ.3,383.25 ಕೋಟಿ ಒಟ್ಟು ರೂ.14,166.71 ಕೋಟಿ ಮೊತ್ತ ವೆಚ್ಚವಾಗಿರುತ್ತದೆ. ಇದು ಹಂಚಿಕೆಗೆ 49% ಮತ್ತು ಬಿಡುಗಡೆಗೆ 76% ಆಗಿರುತ್ತದೆ. ಉಳಿದ ಅನುದಾನವನ್ನು ವೆಚ್ಚ ಮಾಡಲು ಕ್ರಮವಹಿಸಲಾಗುತ್ತಿದೆ. |
| ಇ) | ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನ ಸಂಪೂರ್ಣವಾಗಿ ಬಳಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದಡಿ 76% ವೆಚ್ಚವಾಗಿರುತ್ತದೆ. ದಿನಾಂಕ: 01.12.2022 ರಂದು ನೋಡಲ್ ಏಜೆನ್ಸಿ ಸಭೆ ನಡೆಸಿ ಎಲ್ಲಾ ಇಲಾಖೆಗಳ ಅನುಷ್ಠಾನ ಅಧಿಕಾರಿಗಳಿಗೆ ಅನುದಾನವನ್ನು ಕೂಡಲೇ ಅನುಮೋದಿತ ಕಾರ್ಯಕ್ರಮಗಳಿಗೆ ವೆಚ್ಚ ಭರಿಸುವಂತೆ ನಿರ್ದೇಶನ ನೀಡಲಾಗಿದೆ. ಅದರಂತೆ ವೆಚ್ಚ ಭರಿಸಲು ಕ್ರಮವಹಿಸಲಾಗುತ್ತಿದೆ. |
| ಈ) | ಬಂದಿದ್ದಲ್ಲಿ, ಬಿಡುಗಡೆಯಾಗಿರುವ ಅನುದಾನವನ್ನು ಸಂಪೂರ್ಣವಾಗಿ ಬಳಕೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | |

ಸಕಇ 762 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.